**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಯು.ಬಿ. ವೆಂಕಟೇಶ್ ರವರ**
**ಶೂನ್ಯ ವೇಳೆಯ ಸೂಚನೆಗೆ ಉತ್ತರ**

**ಸೂಚನೆ:**

ಸಮಾಜ ಕಲ್ಯಾಣ ಇಲಾಖೆಯು ಅಧೀನದಲ್ಲಿರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಶಾಲೆಗಳಲ್ಲಿ ಕಳೆದ 5 ವರ್ಷಗಳಲ್ಲಿ 92 ಮಕ್ಕಳು ಸಾವು ಎಂಬ ತಲೆಬರಹದಡಿ ಪ್ರಕಟವಾಗಿದ್ದು ದಿನಾಂಕ:07-12-2023ರ ವಿಶ್ವವಾಣಿ ದಿನಪತ್ರಿಕೆಯಲ್ಲಿ ವರದಿ ಪ್ರಕಟವಾಗಿದ್ದು,, ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಪಂಗಡಗಳ ಕಲ್ಯಾಣ ಸಮಿತಿ ಸಲ್ಲಿಸಿರುವ ವರದಿಯಲ್ಲಿ ಈ ಅಂಶ ಬಹಿರಂಗ ಪಡಿಸಲಾಗಿದೆ. ಸಂಸ್ಥೆಯಲ್ಲಿ ನುರಿತ ಇಂಜಿನಿಯರಿಂಗ್ ವಿಭಾಗವಿಲ್ಲದೆ ಎಲ್ಲಾ ವ್ಯವಹಾರವು ಕೇಂದ್ರ ಕಛೇರಿಯಿಂದ ಜಾರಿಗೊಳ್ಳುತ್ತಿದ್ದು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಅಸಮರ್ಪಕ ಮಾಹಿತಿಯಿಂದ ಕಳಪೆ ಕಾಮಗಾರಿ ನಿರ್ವಹಣೆಯಾಗಿರುವುದಾಗಿ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಕ್ರೈಸ್ ಶಾಲೆಗಳಲ್ಲಿನ ವಿದ್ಯಾರ್ಥಿನಿಲಯಗಳಲ್ಲಿ ಹಾಸಿಗೆ ಮಂಚಗಳಿಲ್ಲದೆ ಒಬ್ಬ ವಿದ್ಯಾರ್ಥಿ ಮಲಗುವ ಸ್ಥಳದಲ್ಲಿ ಇಬ್ಬರು, ಮಲಗುವ ಸ್ಥಳದಲ್ಲಿ ಮೂವರು ಮಲಗುತ್ತಿದ್ದು, ವಿದ್ಯಾರ್ಥಿನಿಯರ ಹಾಸ್ಟಲ್ ಗಳಲ್ಲೂ ಇದೇ ಪರಿಸ್ಥಿತಿಯಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಂತೂ 40 ಮಕ್ಕಳಿರುವ ಕಡೆ 100 ಮಕ್ಕಳಿದ್ದು ಒತ್ತಡದಲ್ಲಿ ವಿದ್ಯಾಭ್ಯಾಸ ಪಡೆಯುವ ಧಾವಂತ ಪರಿಸ್ಥಿತಿಯಿದೆ ಮೃತ ಮಕ್ಕಳ ಪೈಕಿ 29 ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗಿದ್ದು, ಕೆಲವರು ಸ್ವಂತ ಊರುಗಳಿಗೆ ತೆರಳುವಾಗ ಅಸುನೀಗಿರುವುದಾಗಿ ಅನುಮಾನ ವ್ಯಕ್ತವಾಗಿದೆ, ಈ ಸಂಬಂಧ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ತನಿಖೆ ಕೈಗೊಂಡಿರುವ ಬಗ್ಗೆ ಸ್ಪಷ್ಟನೆ ದೊರಕಿಲ್ಲ. ಮೂಲಭೂತ ಸೌಕರ್ಯಗಳನ್ನುನೀಡುವಲ್ಲಿಆರ್ಥಿಕ ಇಲಾಖೆಯ ಹಸ್ತಕ್ಷೇಪವಿರುವುದಾಗಿ ತಿಳಿದು ಬಂದಿರುತ್ತದೆ. ಈ ಶಾಲೆಗಳಲ್ಲಿ ಕಲೆ, ಸಂಗೀತ, ಕಂಪ್ಯೂಟರ್ ಶಿಕ್ಷಣ ಕಲಿಸುವ ಸವಲತ್ತುಗಳಿದ್ದು, ಶಿಕ್ಷಕರ ಕೊರತೆಯಿಂದ ಪಾಲನೆಯಾಗಿರುವುದಿಲ್ಲ ಎಂಬ ಅಂಶವು ಬೆಳಕಿಗೆ ಬಂದಿರುತ್ತದೆ.

ಆದುದರಿಂದ ಮೇಲಿನ ಎಲ್ಲಾ ಅಂಶಗಳ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರು ಸಂಬಂಧಪಟ್ಟವರೊಂದಿಗೆ ಸಭೆ ನಡೆಸಿ ಕರ್ನಾಟಕ ವಸತಿ ಶೀಕ್ಷಣ ಸಂಸ್ಥೆಗಳ ವಿದ್ಯಾರ್ಥಿನಿಲಯಗಳಿಗೆ ಗುಣಮಟ್ಟದ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಜರೂರು ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಸಮಾಜ ಕಲ್ಯಾಣ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಉತ್ತರ:**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಪರಿಶಿಷ್ಟ ಜಾತಿ- 503, ಪರಿಶಿಷ್ಟ ವರ್ಗ-156 ಹಿಂದುಳಿದ ವರ್ಗ-174 ಒಟ್ಟಾರೆ 833 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಸದರಿ ವಸತಿ ಶಾಲೆ/ಕಾಲೇಜುಗಳಲ್ಲಿ ರೂ.2.16 ಲಕ್ಷ ವಿದ್ಯಾರ್ಥಿಗಳಿಗೆ ಉಚಿತ ವಸತಿಯುತ ಶಿಕ್ಷಣವನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ. ವಸತಿ ಶಾಲೆಗಳಲ್ಲಿ ಕಳೆದ 5 ವರ್ಷಗಳಲ್ಲಿ 10 ವಿದ್ಯಾರ್ಥಿಗಳು ವಸತಿ ಶಾಲೆಗಳಲ್ಲಿ ಹಾಗೂ 16 ವಿದ್ಯಾರ್ಥಿಗಳು ಮನೆಗೆ ತೆರಳಿದ ಸಂದರ್ಭದಲ್ಲಿ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ವಸತಿ ಶಾಲೆಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ 10 ಪ್ರಕರಣಗಳಿಗೆ ಸಂಬಂಧಿಸಿದಂತೆ ಪೋಲಿಸ್ ಠಾಣೆಗಳಲ್ಲಿ F.I.R ದಾಖಲಾಗಿರುತ್ತದೆ. ಸದರಿ ವಸತಿ ಶಾಲೆಗಳ ಪ್ರಾಂಶುಪಾಲರು ಮತ್ತು ಸಿಬ್ಬಂದಿಗಳ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ಜರುಗಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಸಕಇ-ಎಂಡಿಎಸ್/66/2023, ದಿನಾಂಕ:07.07.2023 ರಲ್ಲಿ 77ನೇ ಆಡಳಿತ ಮಂಡಳಿ ಸಭೆಯ ತೀರ್ಮಾನದಂತೆ ವಸತಿ ಶಾಲೆ/ಕಾಲೇಗಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಆಕಸ್ಮಿಕವಾಗಿ ಶಾಲೆ/ಕಾಲೇಜುಗಳಲ್ಲಿ ಮೃತಪಟ್ಟಲ್ಲಿ ರೂ.4.00 ಲಕ್ಷ ಮತ್ತು ರಜಾ ಇತ್ಯಾದಿಗಳಲ್ಲಿ ವಿದ್ಯಾರ್ಥಿಗಳು ಅವರ ಸ್ವಂತ ಊರಿಗೆ ಹೋಗಿದ್ದಾಗ ಮೃತಪಟ್ಟಲ್ಲಿ ರೂ.3.00 ಲಕ್ಷಗಳನ್ನು ಮೃತಪಟ್ಟ ವಿದ್ಯಾರ್ಥಿಗಳ ಪೋಷಕರಿಗೆ ಪರಿಹಾರಧನವಾಗಿ ನೀಡಲು ಆದೇಶಿಸಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ತಾಂತ್ರಿಕ ಶಾಖೆಯು ಕಾರ್ಯನಿರ್ವಹಿಸುತ್ತಿದ್ದು ತಾಂತ್ರಿಕ ಶಾಖೆಗೆ ಅಧೀಕ್ಷಕ ಇಂಜಿನಿಯರ್ ಮುಖ್ಯಸ್ಥರಾಗಿರುತ್ತಾರೆ. ಅಧೀಕ್ಷಕ ಇಂಜಿನಿಯರ್‌ರವರ ಅಧೀನದಲ್ಲಿ 03 ಕಾರ್ಯಪಾಲಕ ಇಂಜಿನಿಯರ್, 12 ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಹಾಯಕ ಇಂಜಿನಿಯರ್ ಮತ್ತು ಕಿರಿಯ ಇಂಜಿನಿಯರ್‌ಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ಸಂಘದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಇಂಜಿನಿಯರ್‌ಗಳು ಲೋಕೋಪಯೋಗಿ ಇಲಾಖೆಯಲ್ಲಿ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸಿರುವ ಇಂಜಿನಿಯರ್ ಗಳಾಗಿದ್ದು, ಸಂಘದ ಕೇಂದ್ರ ಕಛೇರಿಯಲ್ಲಿ ಮತ್ತು ಜಿಲ್ಲಾವಾರು ಕಾಮಗಾರಿ ನಿರ್ವಹಿಸುತ್ತಿರುವ ಸ್ಥಳಗಳಲ್ಲಿ ನುರಿತ ಸಹಾಯಕ/ಕಿರಿಯ ಇಂಜಿನಿಯರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಸುಮಾರು 50 ಇಂಜಿನಿಯರ್‌ಗಳು ಕಾರ್ಯನಿರ್ವಹಿಸುತ್ತಿರುತ್ತಾರೆ.

ಈ ಹಿಂದೆ ಎಲ್ಲಾ ಇಂಜಿನಿಯರ್‌ಗಳು ಕೇಂದ್ರ ಕಛೇರಿಯನ್ನೇ ಕೇಂದ್ರಸ್ಥಾನವನ್ನಾಗಿಸಿ ಕಾಮಗಾರಿಗಳ ಪ್ರಗತಿ ಪರಿಶೀಲನೆಗೆ ಸಂದರ್ಭಾನುಸಾರ ಸ್ಥಳಪರಿವೀಕ್ಷಣೆ ನಡೆಸಲಾಗುತ್ತಿತ್ತು. ಪ್ರಸ್ತುತ ಕಾರ್ಯಪಾಲಕ ಇಂಜಿನಿಯರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಸಹಾಯಕ/ಕಿರಿಯ ಇಂಜಿನಿಯರ್‌ಗಳಿಗೆ ಜಿಲ್ಲೆಗಳಲ್ಲಿ ಕೇಂದ್ರ ಸ್ಥಾನಗಳನ್ನು ನಿಗಧಿಪಡಿಸಲಾಗಿರುತ್ತದೆ. ಈ ಇಂಜಿನಿಯರ್ ಗಳು ತಮ್ಮ ಕೇಂದ್ರಸ್ಥಾನಗಳಿಂದಲೇ ಕಾರ್ಯನಿರ್ವಹಿಸುತ್ತಿರುತ್ತಾರೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ಕೈಗೊಳ್ಳಲಾಗುವ ಕಾಮಗಾರಿಗಳ ಡಿ.ಪಿ.ಆರ್. ಗಳನ್ನು ತಯಾರಿಸಲು ನುರಿತ ಸಂಸ್ಥೆರವರನ್ನು ಟೆಂಡರ್ ಮೂಲಕ ನಿಪುಣತೆ/ಅರ್ಹತೆ ಪರಿಶೀಲಿಸಿ ನಿಯೋಜಿಸಲಾಗಿರುವ ಸಂಸ್ಥೆಗಳಿಂದ ಕಾಮಗಾರಿಗಳಿಗೆ ಸಂಬಂಧಿಸಿದ ವಿಸ್ತೃತ ಕಾಮಗಾರಿಯ ಯೋಜನಾ ವರದಿಗಳನ್ನು ಪಡೆಯಲಾಗುತ್ತಿರುತ್ತದೆ. ಕಾಮಗಾರಿಯ ಪ್ರಗತಿಯ ಹಂತದಲ್ಲಿ ವಾಸ್ತು ಶಿಲ್ಪ ವಿನ್ಯಾಸ, ಸ್ಟ್ರಕ್ಚರಲ್ ವಿನ್ಯಾಸಗಳಂತೆ, ಪ್ರತಿ ಹಂತದಲ್ಲೂ ಎಲ್ಲಾ ರೀತಿಯ ಗುಣಮಟ್ಟ ಪರಿಶೀಲನೆ ಮತ್ತು ಕಾಮಗಾರಿ ಮೇಲುಸ್ತುವಾರಿಗೆ ಪ್ರತ್ಯೇಕವಾಗಿ ಟೆಂಡರ್ ಮುಖಾಂತರ ನುರಿತ ಯೋಜನಾ ಸಮಾಲೋಚಕರನ್ನು ನಿಯೋಜಿಸಲಾಗುತ್ತಿರುತ್ತದೆ ಮತ್ತು ಪ್ರತಿ ಕಾಮಗಾರಿಯ ಪ್ರಗತಿ ಹಂತದಲ್ಲಿ ಗುಣಮಟ್ಟ ಪರಿಶೀಲನೆಗಾಗಿ ನುರಿತ 3ನೇ ವ್ಯಕ್ತಿ ತಪಾಸಣಾಗಾರರನ್ನು ನಿಯೋಜಿಸಲಾಗಿದ್ದು, ಸದರಿಯವರು ಪ್ರಗತಿ ಹಂತಗಳಲ್ಲಿನ ಗುಣಮಟ್ಟ ಪರಿಶೀಲನೆ ಮಾಡಿ ಈ ಕಛೇರಿಗೆ ವರದಿಯನ್ನು ಕಾಲ ಕಾಲಕ್ಕೆ ಸಲ್ಲಿಸುತ್ತಿರುತ್ತಾರೆ. ಯೋಜನಾ ಸಮಾಲೋಚಕರು ಮತ್ತು 3ನೇ ವ್ಯಕ್ತಿ ತಪಾಸಣಾ ವರದಿಗಾರರು ಕಾಲ ಕಾಲಕ್ಕೆ ನೀಡುವ ಕಾಮಗಾರಿಗಳ ಗುಣಮಟ್ಟದ ಮತ್ತು ಪ್ರಗತಿಯ ವರದಿಗಳನ್ನು ಸಂಘದ ಇಂಜಿನಿಯರ್‌ಗಳು ಪರಿಶೀಲಿಸಿ ಖಾತರಿಪಡಿಸಿಕೊಂಡು ಮುಂದಿನ ಕ್ರಮವಹಿಸುತ್ತಿರುತ್ತಾರೆ. ಸಂಘದ ವತಿಯಿಂದ ನಿರ್ವಹಿಸುತ್ತಿರುವ ಕಾಮಗಾರಿಗಳಲ್ಲಿ ಯಾವುದೇ ರೀತಿಯ ಕಟ್ಟಡಗಳು ಕಳಪೆಯಾಗದ ರೀತಿ ಉತ್ತಮ ಗುಣಮಟ್ಟವನ್ನು ಕಾಪಾಡಿಕೊಂಡು ಕಟ್ಟಡ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ ಕಾಲೇಜುಗಳಿಗೆ ಅತ್ಯವಶ್ಯ ಮೂಲಭೂತ ಸೌಕರ್ಯಗಳಾದ ಸಿದ್ಧಪಡಿಸಿದ ಸಮವಸ್ತ್ರ, ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿಗಳು, ಶೂ, ಸಾಕ್ಸ್, ಟೈ ಮತ್ತು ಬೆಲ್ಟ್, ಶುಚಿಸಂಭ್ರಮ ಕಿಟ್ ಪಠ್ಯಪುಸ್ತಕ ಪ್ರತಿ ಶೈಕ್ಷಣಿಕ ವರ್ಷದಲ್ಲಿ ಒದಗಿಸಲಾಗುತ್ತಿದೆ.

ಹಿಂದಿನ ಶೈಕ್ಷಣಿಕ ವರ್ಷಗಳಲ್ಲಿ ಅನುದಾನ ಲಭ್ಯತೆ ಅನುಸಾರ ಟು ಟಯರ್ ಕಾಟ್ , ಹಾಸಿಗೆ ದಿಂಬು, ಡೆಸ್ಕ್ ಕಂ ಬೆಂಚ್, ಡೈನಿಂಗ್ ಟೇಬಲ್, ಆಫೀಸ್ ಕಂಪ್ಯೂಟರ್, ಕಂಪ್ಯೂಟರ್ ಛೇರ್ ಮತ್ತು ಟೇಬಲ್ ಇನ್ನಿತರೆ ಅವಶ್ಯ ಮೂಲಭೂತ ಸೌಲಭ್ಯಗಳನ್ನು ಭಾಗಶಃ ವಸತಿ ಶಾಲೆ/ಕಾಲೇಜುಗಳಿಗೆ ಒದಗಿಸಲಾಗಿರುತ್ತದೆ.

2022-23ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ಸಕಇ/578/ಎಂಡಿಎಸ್/2021 ದಿನಾಂಕ:12.05.2022 ರಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜುಗಳಿಗೆ ಗುಣಮಟ್ಟದ ಸೌಲಭ್ಯಗಳನ್ನು ನೀಡಲು